

بسم اللہ الرّحمٰن الرّحیم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–02–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ನಡೆಯುತ್ತಿದೆ. ಕೆಲವು ಯುದ್ಧಗಳ ಬಗ್ಗೆಯೂ ಪ್ರಸ್ತಾಪಿಸಲಾಗಿತ್ತು. ಅಬ್ದುರ್ರಹ್ಮಾನ್ ಬಿನ್ ಗನಮ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ಬನೂ ಖುರೈಝ್ಝದ ಕಡೆಗೆ ರವಾನೆಯಾದಾಗ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಬಂದು ಹೀಗೆ ಹೇಳಿದರು: ಜನರು ನಿಮ್ಮನ್ನು ಲೌಕಿಕ ಸೌಂದರ್ಯವುಳ್ಳ ಉಡಿಗೆಯಲ್ಲಿ ನೋಡಿದರೆ, ಅವರಿಗೆ ಇಸ್ಲಾಂ ಸ್ವೀಕಾರ ಮಾಡುವ ಬಯಕೆ ಹೆಚ್ಚಾಗುವುದು. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನು ನನ್ನೊಡನೆ ಹೇಳಿರುವನು, ಉಮರ್ ಇಬ್ನು ಖತ್ತಾಬ್‌ರ ಉದಾಹರಣೆ ದೇವದೂತರಲ್ಲಿ ಜಿಬ್ರೀಲ್‌ನಂತಾಗಿದೆ. ಅಲ್ಲಾಹನು ಪ್ರತಿಯೊಂದು ಸಮುದಾಯವನ್ನು ಜಿಬ್ರೀಲ್‌ನ ಮೂಲಕವೇ ನಾಶಮಾಡಿರುವನು. ಪ್ರವಾದಿಗಳಲ್ಲಿ ಉಮರ್‌ರ ಉದಾಹರಣೆ ಹಝ್ರತ್ ನೂಹ್(ಅ)ರಂತಾಗಿದೆ. ಹಝ್ರತ್ ನೂಹ್(ಅ) ಹೀಗೆ ಹೇಳಿದ್ದರು: **ರಬ್ಬಿ ಲಾ ತಧರ್ ಅಲಲ್‌ಅರ್‌ಝಿ ಮಿನಲ್ ಕಾಫಿರೀನ ದಯ್ಯಾರಾ**. ಎಂದರೆ ಹೇ ನನ್ನ ಪ್ರಭೂ, ಈ ಪ್ರದೇಶದಲ್ಲಿ ಯಾವೊಬ್ಬ ಅವಿಶ್ವಾಸಿಯನ್ನಾಗಲಿ ನೀನು ಬದುಕಲು ಬಿಡಬೇಡ. ಹಾಗೂ ಅಬೂಬಕರ್‌ರ ಉದಾಹರಣೆ ದೇವದೂತರಲ್ಲಿ ಮೀಕಾಈಲ್‌ನಂತಿದೆ. ಭೂಮಿಯಲ್ಲಿರುವ ಎಲ್ಲ ಜನರನ್ನು ಕ್ಷಮಿಸಬೇಕೆಂದು ಮೀಕಾಈಲ್ ದುಆ ಮಾಡುತ್ತಾರೆ. ಪ್ರವಾದಿಗಳಲ್ಲಿ ಅಬೂಬಕರ್‌ರ ಉದಾಹರಣೆ ಹಝ್ರತ್ ಇಬ್ರಾಹೀಮ್(ಅ)ರಂತಾಗಿದೆ. ಅವರು ಹೀಗೆ ಹೇಳಿದ್ದರು: **ಫಮನ್ ತಬಿಅನೀ ಫಇನ್ನಹೂ ಮಿನ್ನೀ ವಮನ್ ಅಸಾನೀ ಫಇನ್ನಕ ಗಫೂರುರ್ರಹೀಂ**. ಎಂದರೆ, ಯಾರು ನನ್ನನ್ನು ಅನುಸರಿಸುತ್ತಾನೋ ಅವನು ನಮ್ಮೊಂದಿಗೆ ಸೇರಿದವನಾಗುತ್ತಾನೆ. ಯಾರಾದರೂ ನನ್ನನ್ನು ಅನುಸರಿಸದಿದ್ದರೆ, ನೀನು ಕ್ಷಮಾಶೀಲನೂ ಕಾರುಣ್ಯವಂತನೂ ಆಗಿದ್ದೀಯಷ್ಟೆ. ಹಝ್ರತ್ ಪೈಗಂಬರ್(ಸ) ಹೇಳಿದರು: ಅಲ್ಲಾಹನಾಣೆ, ನೀವಿಬ್ಬರೂ ನನ್ನ ಬಗ್ಗೆ ಒಂದು ವಿಷಯದಲ್ಲಿ ಒಮ್ಮತಾಭಿಪ್ರಾಯವನ್ನು ಹೊಂದಿದರೆ, ನಾನು ನಿಮ್ಮ ಸಲಹೆಗೆ ವಿರುದ್ಧವಾಗಿ ನಡೆಯುವುದಿಲ್ಲ. ಆದರೆ ನಿಮ್ಮಿಬ್ಬರ ಸ್ಥಿತಿ ಸಲಹೆ ನೀಡುವುದರಲ್ಲಿ ಜಿಬ್ರೀಲ್ ಮತ್ತು ಮೀಕಾಈಲ್ ಹಾಗೂ ನೂಹ್(ಅ) ಮತ್ತು ಇಬ್ರಾಹಿಂ(ಅ)ರಂತೆ ಬೇರೆ ಬೇರೆ ತರದ್ದಾಗಿರುತ್ತದೆ.

ಒಂದು ವರದಿ ಹೀಗಿದೆ: ಬನೂ ಖುರೈಝ್ಝದಲ್ಲಿ ಹಝ್ರತ್ ಸಅದ್(ರ) ಮತ್ತು ಹಝ್ರತ್ ಕಅಬ್ ಬಿನ್ ಅಮ್ರ್ ಮಾಧ್ನಿ ಸಹ ಬಾಣ ಚಲಾಯಿಸುವವರಲ್ಲಿ ಸೇರಿದವರಾಗಿದ್ದರು. ಅವರು ಬಹಳವಾಗಿ ಬಾಣಗಳನ್ನು ಚಲಾಯಿಸಿದ್ದರು. ರಾತ್ರಿಯ ಸ್ವಲ್ಪ ಭಾಗ ದಾಟಿದಾಗ ಅವರು ತಮ್ಮ ತಮ್ಮ ತಂಗುದಾಣಗಳ ಕಡೆಗೆ ಹೊರಟರು ಹಾಗೂ ಹಝ್ರತ್ ಸಅದ್ ಬಿನ್ ಉಬಾದ ಕಳುಹಿಸಿದ ಖರ್ಜೂರಗಳನ್ನು ತಿಂದು ರಾತ್ರಿ ಕಳೆದರು. ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಸಹ ಖರ್ಜೂರಗಳನ್ನು ತಿನ್ನುತ್ತಿದ್ದರು. 'ಖರ್ಜೂರ ಎಷ್ಟು ಉತ್ತಮ ಆಹಾರ' ಎಂದು ಹಝ್ರತ್ ಪೈಗಂಬರ್(ಸ) ಹೇಳುತ್ತಿದ್ದರು.

ಹಝ್ರತ್ ಆಯಿಶ(ರ) ಹೇಳುತ್ತಾರೆ: ಹಝ್ರತ್ ಸಅದ್‌ರ ಮರಣ ಸಮೀಪವಾದಾಗ ಹಝ್ರತ್ ಪೈಗಂಬರ್(ಸ), ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರ್(ರ) ಅವರ ಬಳಿಗೆ ಹೋದರು. ಹಝ್ರತ್ ಆಯಿಶ(ರ) ಹೇಳುತ್ತಾರೆ: ಯಾರ ಕೈಯಲ್ಲಿ ಮುಹಮ್ಮದ್(ಸ)ರ ಜೀವವಿದೆಯೋ ಆ ಅಲ್ಲಾಹನ ಮೇಲೆ ಪ್ರಮಾಣ ಮಾಡಿ ಹೇಳುತ್ತೇನೆ, ನಾನು ಹಝ್ರತ್ ಉಮರ್‌ರ ಅಳುವಿನ ಸ್ವರ ಮತ್ತು ಹಝ್ರತ್ ಅಬೂಬಕರ್‌ರ ಅಳುವಿನ ಸ್ವರದ ವ್ಯತ್ಯಾಸವನ್ನು ಅರಿತಿದ್ದೆ. ನಾನು ಆ ಸಮಯದಲ್ಲಿ ನನ್ನ ಕೊಠಡಿಯಲ್ಲಿದ್ದೆ. ಆ ಸಮಯದಲ್ಲಿ ಅವರಿಬ್ಬರೂ ಅಳುತ್ತಿದ್ದರು. **ರುಹಮಾಉ ಬೈನಹುಂ** ಎಂದು ಅಲ್ಲಾಹನು ಹೇಳಿರುವ ಹಾಗೆಯೇ ಅವರೆಲ್ಲರೂ ಪರಸ್ಪರ ಬಹಳ ಪ್ರೀತಿಸುತ್ತಿದ್ದರು.

ಹುದೈಬಿಯ ಸಂಧಿಯ ಬಗ್ಗೆ ಹಿಂದಿನ ಖುತ್ಬಗಳಲ್ಲಿ ಪ್ರಸ್ತಾಪಿಸಲಾದಂತೆ ಒಂದು ಕನಸಿನ ಆಧಾರದಲ್ಲಿ ಹಝ್ರತ್ ಪೈಗಂಬರ್(ಸ) ಸಾವಿರದ ನಾನ್ನೂರು ಸಹಾಬಿಯರ ಜೊತೆಗೆ ಹಿಜರೀ 6, ಧುಲ್‌ಖಅದ್ ಮಾಸದಲ್ಲಿ ಉಮ್ರಾ ಕರ್ಮಾನುಷ್ಠಾನ ಮಾಡಲು ಹೊರಟರು. ಮಕ್ಕದ ಸತ್ಯನಿಷೇಧಿಗಳು ಹಝ್ರತ್ ಪೈಗಂಬರ್(ಸ)ರನ್ನು ಮಕ್ಕದಲ್ಲಿ ಪ್ರವೇಶಿಸುವುದರಿಂದ ತಡೆಯಲು ತಯಾರು ಮಾಡುತ್ತಿದ್ದಾರೆ ಎಂದು ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಾಯಿತು. ಬುಖಾರಿಯ ಒಂದು ವರದಿಯ ಪ್ರಕಾರ ಈ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಖುರೈಶರ ಒಪ್ಪಂದದ ಶರತ್ತುಗಳು ನಿರ್ಣಯಿಸಲಾದುವು.

ಒಪ್ಪಂದದ ಕರಾರು ಪತ್ರ ಬರೆಯುತ್ತಿರುವಾಗ ಸುಹೈಲ್ ಬಿನ್ ಅಮ್ರ್‌ನ ಮಗನಾದ ಅಬೂಜಂದಲ್ ನಡುಗುತ್ತಾ ಮಕ್ಕದಿಂದ ಅಲ್ಲಿಗೆ ಧಾವಿಸಿ ಬಂದನು. ಮಕ್ಕದವರ ಕಡೆಯಿಂದ ರಾಯಭಾರಿಯಾಗಿ ಬಂದಿದ್ದ ಸುಹೈಲ್ ಬಿನ್ ಅಮ್ರ್ ಅಬೂಜಂದಲ್‌ನನ್ನು ಮಕ್ಕದ ಕಡೆಗೆ ಮರಳಿಸಲು ಬೇಡಿಕೆ ಇರಿಸಿದನು. ಹಝ್ರತ್ ಪೈಗಂಬರ್(ಸ) ಆತನನ್ನು ಖುರೈಶಿಯರಿಗೆ ಮರಳಿಸಿದರು. ಹಝ್ರತ್ ಉಮರ್(ರ)ರಿಂದ ಅದನ್ನು ಸಹಿಸಲು ಸಾಧ್ಯವಾಗಲಿಲ್ಲ. ಅವರು ಹಝ್ರತ್ ಪೈಗಂಬರ್(ಸ)ರೊಡನೆ ಕೇಳಿದರು: ನೀವು ಅಲ್ಲಾಹನ ಸತ್ಯಸಂಧರಾದ ಪ್ರವಾದಿಯಲ್ಲವೇ? ಖಂಡಿತವಾಗಿಯೂ ಹೌದೆಂದು ಹಝ್ರತ್ ಪೈಗಂಬರ್(ಸ)

ಹೇಳಿದರು. ಹಝ್ರತ್ ಉಮರ್(ರ) ಹೇಳಿದರು: ನಾವು ಸತ್ಯದಲ್ಲಿಯೂ ನಮ್ಮ ಶತ್ರುಗಳು ಇರುವುದು ಅಸತ್ಯದಲ್ಲಿಯೂ ಅಲ್ಲವೇ? ಖಂಡಿತವಾಗಿಯೂ ಹೌದೆಂದು ಹಝ್ರತ್ ಪೈಗಂಬರ್(ಸ) ಹೇಳಿದರು. ಹಝ್ರತ್ ಉಮರ್(ರ) ಕೇಳಿದರು: ಹಾಗಾದರೆ, ನಾವು ಈ ನಿಂದನೀಯ ಶರತ್ತುಗಳನ್ನು ಏಕೆ ಸಹಿಸಬೇಕು? ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ಅಲ್ಲಾಹನ ಪ್ರವಾದಿಯಾಗಿರುವೆನು. ಅವನ ಇಚ್ಛೆಯನ್ನು ನಾನು ಬಲ್ಲೆನು. ಅವನ ಇಂಗಿತಕ್ಕೆ ವಿರುದ್ಧವಾಗಿ ನನಗೆ ಹೋಗಲು ಸಾಧ್ಯವಲ್ಲ. ಅವನೇ ನನ್ನ ಸಹಾಯಕ. ಹಝ್ರತ್ ಉಮರ್(ರ) ಕೇಳಿದರು: ನಾವು ಬೈತುಲ್ಲಾಹ್‌ದ ತವಾಫ್ ಮಾಡುವೆವು ಎಂದು ನೀವು ನಮ್ಮೊಡನೆ ಹೇಳಿರಲಿಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಇದೇ ವರ್ಷ ತವಾಫ್ ಮಾಡುವೆವು ಎಂದೂ ನಾನು ಹೇಳಿರುವೆನೇ? ಇಲ್ಲವೆಂದು ಹಝ್ರತ್ ಉಮರ್(ರ) ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಹಾಗಾದರೆ, ಕಾಯುತ್ತಾ ಇರಿ. ಇನ್‌ಶಾಅಲ್ಲಾಹ್ – ಖಂಡಿತವಾಗಿಯೂ ನೀವು ಮಕ್ಕದಲ್ಲಿ ಪ್ರವೇಶಿಸಿ ಬೈತುಲ್ಲಾಹ್‌ದ ತವಾಫ್ ಮಾಡುವಿರಿ. ಆದರೆ ಹಝ್ರತ್ ಉಮರ್(ರ)ರಿಗೆ ಸಮಾಧಾನವಾಗಲಿಲ್ಲ. ಅವರು ಹಝ್ರತ್ ಅಬೂಬಕರ್(ರ)ರ ಬಳಿಗೆ ಹೋಗಿ ಅವರೊಡನೆಯೂ ಇದೇ ರೀತಿಯ ಮಾತುಗಳನ್ನಾಡಿದರು. ಹಝ್ರತ್ ಅಬೂಬಕರ್(ರ) ಸಹ ಅದೇ ರೀತಿಯ ಉತ್ತರವನ್ನು ನೀಡಿದರು. ಮತ್ತೂ ಅವರು ಹೇಳಿದರು: ನೋಡು ಉಮರ್, ಹಝ್ರತ್ ಪೈಗಂಬರ್(ಸ)ರ ಪೀಠದಲ್ಲಿ ನೀನು ಇರಿಸಿರುವ ಕೈಯನ್ನು ಸಡಿಲಗೊಳಿಸಬೇಡ. ಏಕೆಂದರೆ, ಅಲ್ಲಾಹನಾಣೆ ಅವರು ಸತ್ಯವಂತರು. ಹಝ್ರತ್ ಉಮರ್(ರ) ಹೇಳುತ್ತಾರೆ: ಅನಂತರ ನಾನು ಬಹಳ ಲಜ್ಜಿತನಾದೆನು. ನಾನು ಪಶ್ಚಾತ್ತಾಪವೆಂಬ ರೀತಿಯಲ್ಲಿ ಮತ್ತು ಈ ದೌರ್ಬಲ್ಯದ ಪ್ರಭಾವವನ್ನು ತೊಳೆದು ಹಾಕಲಿಕ್ಕಾಗಿ ಅನೇಕ ಐಚ್ಛಿಕ ಸತ್ಕರ್ಮಗಳನ್ನು ಮಾಡಿದೆನು.

ಈ ಹುದೈಬಿಯ ಸಂಧಿಯ ವಿವರಣೆಯನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆಯುತ್ತಾರೆ: ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ಉರ್‌ವ ಬಂದು ಖುರೈಶಿಯರ ಪರವಾಗಿ ಹೆಚ್ಚಿನ ಶರತ್ತುಗಳನ್ನು ಇರಿಸಲಿಕ್ಕಾಗಿ ಹೀಗೆ ಹೇಳಿದನು: ಹೇ ಮುಹಮ್ಮದ್, (ಸಲ್ಲಲ್ಲಾಹು ಅಲೈಹಿ ವಸಲ್ಲಂ) ಖುರೈಶಿಗಳು ವಿಜಯ ಸಾಧಿಸಿದರೆ ದೇವನಾಣೆ, ನಿಮ್ಮನ್ನು ಬಿಟ್ಟುಹೋಗಬಹುದಾದ ಜನರ ಮುಖಗಳನ್ನು ನಿಮ್ಮ ಸುತ್ತಮುತ್ತ ನಾನು ಕಾಣುತ್ತಿದ್ದೇನೆ. ಹಝ್ರತ್ ಪೈಗಂಬರ್(ಸ)ರ ಸಮೀಪದಲ್ಲೇ ಕುಳಿತುಕೊಂಡಿದ್ದ ಹಝ್ರತ್ ಅಬೂಬಕರ್(ರ)ರಿಗೆ ಉರ್‌ವನ ಈ ಮಾತುಗಳನ್ನು ಕೇಳಿ ತೀವ್ರ ಕೋಪಬಂತು ಮತ್ತು ಅವರು ಹೀಗೆ ಹೇಳಿದರು: ಹೋಗು ಹೋಗು, ಹೋಗಿ ನಿಮ್ಮ ಲಾತ್ ವಿಗ್ರಹವನ್ನು ಚುಂಬಿಸುತ್ತಾ ಇರು. ನಾವು ಅಲ್ಲಾಹನ ಪ್ರವಾದಿಯನ್ನು ಬಿಟ್ಟುಬಿಡುವೆವೋ? ಎಂದರೆ, ನೀವು ವಿಗ್ರಹಕ್ಕಾಗಿ ಸಹನೆ ಮತ್ತು ಸ್ಥೈರ್ಯವನ್ನು ತೋರಿಸುತ್ತಿರುವ ಸ್ಥಿತಿಯಲ್ಲಿ ಇರುವಿರಿ. ನಾವು ಅಲ್ಲಾಹನ ಮೇಲೆ ನಂಬಿಕೆ ಇರಿಸಿರುವ ಸ್ಥಿತಿಯಲ್ಲೂ ನಾವು ಹಝ್ರತ್ ಪೈಗಂಬರ್(ಸ)ರನ್ನು ಬಿಟ್ಟು ಓಡಿಹೋಗಲು ಸಾಧ್ಯವೇ?

ಈ ಒಪ್ಪಂದದ ಎರಡು ನಕಲುಪ್ರತಿಗಳನ್ನು ತಯಾರಿಸಲಾಗಿದ್ದುವು ಮತ್ತು ಮುಸ್ಲಿಮರ ಕಡೆಯಿಂದ ಸಾಕ್ಷಿಯಾಗಿ ಹಝ್ರತ್ ಅಬೂಬಕರ್(ರ) ಸಹ ಇದ್ದರು ಎಂದು ಸೀರತ್ ಖಾತಮುನ್ನಬಿಯ್ಯೀನ್‌ನಲ್ಲಿ ಬರೆಯಲಾಗಿದೆ. ಇಸ್ಲಾಮಿನಲ್ಲಿ ಹುದೈಬಿಯ ಸಂಧಿಗಿಂತ ದೊಡ್ಡ ಬೇರೆ ವಿಜಯವಿಲ್ಲವೆಂದು ಹಝ್ರತ್ ಅಬೂಬಕರ್(ರ) ಹೇಳಿಕೊಳ್ಳುತ್ತಿದ್ದರು.

ಹಝ್ರತ್ ಅಬೂಬಕರ್(ರ)ರ ದಂಡಯಾತ್ರೆ ಬನೂಫಝಾರ್‌ನ ಕಡೆಗೆ ಹಿಜರಿ 6ರಲ್ಲಿ ನಡೆದಿತ್ತು. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ಈ ಸೈನ್ಯದ ಸೇನಾಧಿಪತಿಯನ್ನಾಗಿ ನಿಶ್ಚಯಿಸಿದ್ದರು. ಇದರಲ್ಲಿ ಬಹುದೇವಾರಾಧಕರ ಅನೇಕ ಜನರು ಕೊಲ್ಲಲ್ಪಟ್ಟರು ಮತ್ತು ಅನೇಕ ಜನರನ್ನು ಬಂಧಿಸಲಾಯಿತು ಎಂದು ಈ ಯುದ್ಧದ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಬರೆದಿರುವರು.

ನಜದಿನ ಕಡೆಗೆ ಹಝ್ರತ್ ಅಬೂಬಕರ್(ರ)ರ ದಂಡಯಾತ್ರೆ. ಈ ದಂಡಯಾತ್ರೆ ಹಿಜರೀ 7, ಶಾಬಾನ್ ತಿಂಗಳಲ್ಲಿ ನಡೆದಿತ್ತು ಎಂದು ಈ ಕುರಿತು ಬರೆಯಲಾಗಿದೆ: ಹಝ್ರತ್ ಸಲ್ಮಾ ಬಿನ್ ಅಕೂಲ್‌ರಿಂದ ಹೀಗೆ ವರದಿಯಾಗಿದೆ; ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ)ರನ್ನು ಕಳುಹಿಸಿದರು ಮತ್ತು ನಮ್ಮ ಮೇಲೆ ಅವರನ್ನು ಅಮೀರನ್ನಾಗಿ ಮಾಡಿದರು.

ಖೈಬರ್ ಯುದ್ಧದ ಬಗ್ಗೆ ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಹಿಜರೀ 7 ಮುಹರ್ರಂ ತಿಂಗಳಲ್ಲಿ ಖೈಬರ್ ಕಡೆಗೆ ಹೋದರು. ಲಾಹೋರಿನಿಂದ ಪ್ರಕಾಶನಗೊಂಡ **ಸಯ್ಯಿದುನಾ ಸಿದ್ದೀಖ್ ಅಕ್ಬರ್** ಎಂಬ ಒಂದು ಪುಸ್ತಕದ ಲೇಖಕ ಹೀಗೆ ಬರೆಯುತ್ತಾರೆ: ಒಂದು ಕೋಟೆ ಹಝ್ರತ್ ಅಬೂಬಕರ್(ರ)ರ ಕೈಗಳಿಂದ ಜಯಿಸಿತು, ಮತ್ತೊಂದು ಕೋಟೆ ಹಝ್ರತ್ ಉಮರ್‌ರ(ರ) ಕೈಗಳಿಂದ ಜಯಿಸಿತು ಹಾಗೂ ಮೂರನೇ ಕೋಟೆ ಹಝ್ರತ್ ಅಲಿ(ರ)ರಿಂದ ಜಯಿಸಿತು. ಖೈಬರ್ ಯುದ್ಧದ ವಿಜಯದ ನಂತರ ಹಝ್ರತ್ ಪೈಗಂಬರ್(ಸ) ಇತರ ಸಂಬಂಧಿಕರಲ್ಲದೇ ಹಝ್ರತ್ ಅಬೂಬಕರ್(ರ)ರಿಗೂ 15 ಸಾವಿರ ಕಿಲೋ ಧಾನ್ಯ ಮತ್ತು ಖರ್ಜೂರಗಳು ನೀಡಿದರು.

ಹುದೈಬಿಯ ಒಪ್ಪಂದಕ್ಕೆ ವಿರುದ್ಧವಾಗಿ ಖುರೈಶಿಗಳ ಮಿತ್ರಗೋತ್ರವಾದ ಬನೂಬಕರ್ ಮುಸ್ಲಿಮರ ಮಿತ್ರಗೋತ್ರವಾದ ಬನೂಖುಝಾಅದ ಮೇಲೆ ದಾಳಿ ನಡೆಸಿತು. ಖುರೈಶಿಗಳು ಆಯುಧಗಳು ಮತ್ತು ಸವಾರಿಗಳೊಂದಿಗೆ ಬನೂಬಕರ್ ಗೋತ್ರಕ್ಕೆ ನೆರವು ನೀಡಿದರು. ಅವರು ಹುದೈಬಿಯದ ಶರತ್ತುಗಳ ಪರಿವೆ ಮಾಡಲಿಲ್ಲ. ಆಗ ಅಬುಸುಫ್‌ಯಾನ್ ಮದೀನಕ್ಕೆ ಬಂದು ಹುದೈಬಿಯದ ಒಪ್ಪಂದವನ್ನು ನವೀಕರಿಸಲು, ಎಂದರೆ ಪುನಃ ಮಾಡಿಕೊಳ್ಳುವಂತೆ ವಿನಂತಿಸಿದರು. ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋದರು. ಆದರೆ ಹಝ್ರತ್ ಪೈಗಂಬರ್(ಸ) ಆತನ ಯಾವುದೇ ಮಾತಿಗೆ ಉತ್ತರ ಕೊಡಲಿಲ್ಲ. ಅನಂತರ ಅವರು ಅಬೂಬಕರ್(ರ)ರ ಮತ್ತು ಹಝ್ರತ್ ಉಮರ್(ರ)ರ ಬಳಿಗೆ ಹೋದರು. ಅವರಿಬ್ಬರೂ ಹಝ್ರತ್ ಪೈಗಂಬರ್(ಸ)ರೊಡನೆ ಮಾತನಾಡಬೇಕೆಂದು ವಿನಂತಿಸಿದರು. ಆದರೆ ಅವರಿಬ್ಬರೂ ನಿರಾಕರಿಸಿದ ನಂತರ ವಿಫಲನಾಗಿ ಮರಳಿ ಹೋದರು.

ಮಕ್ಕಾ ವಿಜಯದ ಯುದ್ಧ ಹಿಜರೀ 8, ರಮಝಾನ್ ತಿಂಗಳಲ್ಲಿ ನಡೆದಿತ್ತು. ಇದನ್ನು **ಅಲ್‌ಫತ್‌ಹುಲ್ ಅಝೀಂ** ಎಂದೂ

ಕರೆಯಲಾಗುತ್ತದೆ. ತಾರೀಖ್ ತಬರಿಯಲ್ಲಿ ಹೀಗೆ ವಿವರಿಸಲಾಗಿದೆ: ಯಾತ್ರೆಯ ತಯಾರಿ ಮಾಡಲು ಹಝ್ರತ್ ಪೈಗಂಬರ್(ಸ) ಜನರೊಡನೆ ಹೇಳಿದರು. ಯಾತ್ರೆಯ ಸಾಮಾನುಗಳನ್ನು ತಯಾರಿ ಮಾಡಿಡಲು ಹಝ್ರತ್ ಪೈಗಂಬರ್(ಸ) ತನ್ನ ಮನೆಯವರೊಡನೆಯೂ ಹೇಳಿದರು. ಹಝ್ರತ್ ಅಬೂಬಕರ್(ರ) ತನ್ನ ಮಗಳಾದ ಹಝ್ರತ್ ಆಯಿಶ(ರ)ರ ಮನೆಗೆ ಹೋದಾಗ ಹಝ್ರತ್ ಆಯಿಶ(ರ) ಹಝ್ರತ್ ಪೈಗಂಬರ್(ಸ)ರ ಸಾಮಾನುಗಳ ತಯಾರಿ ಮಾಡುತ್ತಿದ್ದರು. ಸೀರತ್ ಹಲಬಿಯದಲ್ಲಿ ಹೀಗೆ ಬರೆಯಲಾಗಿದೆ: ಹಝ್ರತ್ ಅಬೂಬಕರ್(ರ) ಹಝ್ರತ್ ಆಯಿಶ(ರ)ರೊಡನೆ ಇದರ ಕುರಿತು ಮಾತನಾಡುತ್ತಿದ್ದಾಗ ಹಝ್ರತ್ ಪೈಗಂಬರ್(ಸ) ಅಲ್ಲಿಗೆ ಬಂದರು. ಖುರೈಶಿಗಳನ್ನು ಎದುರಿಸಲು ನಿರ್ಧರಿಸಿದ್ದೇನೆ ಎಂದು ಹಝ್ರತ್ ಪೈಗಂಬರ್(ಸ) ಹಝ್ರತ್ ಅಬೂಬಕರ್(ರ) ಆ ಬಗ್ಗೆ ಕೇಳಿದಾಗ ಹೇಳಿದರು. ಹಝ್ರತ್ ಅಬೂಬಕರ್(ರ) ಕೇಳಿದರು: ಖುರೈಶ್ ಮತ್ತು ನಮ್ಮ ನಡುವೆ ಒಪ್ಪಂದ ಮತ್ತು ಸಂಧಿಯ ಕಾಲಾವಧಿ ಬಾಕಿಯಿಲ್ಲವೇ? ಹಝ್ರತ್ ಪೈಗಂಬರ್(ಸ) ಹೇಳಿದರು: ಹೌದು, ಆದರೆ ಅವರು ಮೋಸ ಮಾಡಿರುವವರು ಮತ್ತು ಒಪ್ಪಂದವನ್ನು ಮುರಿದಿರುವವರು. ಆದರೆ ಈ ಮಾತನ್ನು ರಹಸ್ಯವಾಗಿಯೇ ಇರಿಸಿರಿ.

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರು ನಿರ್ದೇಶನ ನೀಡಿದಾಗ ಅನೇಕ ಸಾವಿರ ಜನರ ಸೈನ್ಯ ತಯಾರಾಯಿತು. ಹಝ್ರತ್ ಪೈಗಂಬರ್(ಸ) ಯುದ್ಧಕ್ಕಾಗಿ ಹೊರಟಾಗ ಹೀಗೆ ದುಆ ಮಾಡಿದರು: ಹೇ ನನ್ನ ಅಲ್ಲಾಹ್, ನಾನು ನಿನ್ನೊಡನೆ ಹೀಗೆ ಬೇಡಿಕೊಳ್ಳುತ್ತೇನೆ: 'ನೀನು ಮಕ್ಕಾ ನಿವಾಸಿಗಳ ಕಿವಿಗಳನ್ನು ಕಿವುಡುಗೊಳಿಸು. ಅವರ ಗೂಢಚರರನ್ನು ಕುರುಡುಗೊಳಿಸು. ಅವರು ನಮ್ಮನ್ನು ಕಾಣದಿರಲಿ ಮತ್ತು ಅವರ ಕಿವಿಗಳಿಗೆ ನಮ್ಮ ಯಾವುದೇ ಸುದ್ದಿ ತಲುಪದಿರಲಿ.' ಮದೀನದಲ್ಲಿ ನೂರಾರು ಕಪಟವಿಶ್ವಾಸಿಗಳು ಇದ್ದರು. ಆದರೆ ಹತ್ತು ಸಾವಿರ ಸೈನಿಕರನ್ನು ಒಳಗೊಂಡ ಸೇನೆ ಹೊರಟಾಗ, ಯಾವುದೇ ಮಾಹಿತಿ ಕೂಡ ಮಕ್ಕದಲ್ಲಿ ತಲುಪಲಿಲ್ಲ. ಇದು ಅಲ್ಲಾಹನ ಕೆಲಸವಾಗಿತ್ತು.

ತಬ್‌ಖಾತ್ ಇಬ್ನು ಸಅದಿನಲ್ಲಿ ಹೀಗೆ ಬರೆಯಲಾಗಿದೆ: ಮುಸ್ಲಿಮರ ತಂಡ ಇಶಾದ ಸಮಯದಲ್ಲಿ ಮಕ್ಕದಿಂದ ಮದೀನದ ಮಾರ್ಗದಲ್ಲಿ 25 ಕಿ.ಮೀ ದೂರದಲ್ಲಿ ಮರುಝ್ಝುಹರಾನಿಗೆ ತಲುಪಿತು. ಹಝ್ರತ್ ಪೈಗಂಬರ್(ಸ)ರ ಆದೇಶ ಪ್ರಕಾರ ಸಹಾಬಿಯರು 10 ಸಾವಿರ ಜಾಗಗಳಲ್ಲಿ ಬೆಂಕಿ ಹೊತ್ತಿಸಿದರು. ಖುರೈಶಿಗಳಿಗೆ ಮಾಹಿತಿ ಲಭಿಸಿದಾಗ, ಹಝ್ರತ್ ಪೈಗಂಬರ್(ಸ)ರಿಂದ ಅವರಿಗಾಗಿ ಅಭಯವನ್ನು ಪಡೆಯಲಿಕ್ಕಾಗಿ ಅಬೂಸುಫ್‌ಯಾನ್ ಬಿನ್ ಹರಬ್, ಹಕೀಂ ಬಿನ್ ಹಝ್ಝಾಮ್ ಮತ್ತು ಬುದೈಲ್ ಬಿನ್ ವರಖರನ್ನು ಕಳುಹಿಸಿದರು. ಅವರು ಸೈನ್ಯವನ್ನು ಕಂಡಾಗ ತೀವ್ರವಾಗಿ ಗಾಬರಿಗೊಂಡರು. ಅಬುಸುಫ್‌ಯಾನಿನ ಶಬ್ಧವನ್ನು ಹಝ್ರತ್ ಅಬ್ಬಾಸ್ ಕೇಳಿದಾಗ ಅವರು ಉಚ್ಚ ಸ್ವರದಲ್ಲಿ ಹೀಗೆ ಕರೆದು ಹೇಳಿದರು: ಎಲೈ ಅಬೂ ಹಂಝ್ಲುಲ, (ಇದು ಅಬುಸುಫ್‌ಯಾನಿನ ಉಪನಾಮವಾಗಿತ್ತು). ನಾನು ಇಲ್ಲಿದ್ದೇನೆ ಎಂದು ಅಬುಸುಫ್‌ಯಾನ್ ಹೇಳಿದನು. ಹಝ್ರತ್ ಅಬ್ಬಾಸ್(ರ) ಅವನಿಗೆ ಅಭಯ ನೀಡಿದರು ಮತ್ತು ಅವನ ಇಬ್ಬರು ಸಂಗಡಿಗರ ಸಮೇತ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಗೆ ತಂದರು. ಮೂವರೂ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.

ಈ ಪ್ರಸ್ತಾಪ ಮುಂದುವರೆಯುವುದು. ಇನ್‌ಶಾ ಅಲ್ಲಾಹ್.

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِیَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْیِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 04-02-2022*

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim |***Layout****:* U Basheer Ahmad

***Published By****:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon